



# ಕಪ್ಪು ಟೊಮ್ಯಾಟೊ!

ಟೊಮ್ಯಾಟೊ ಹಣ್ಣಿನ ಬಣ್ಣ ಕಡುಗೆಂಪು. ಕಾಯಿಯಾಗಿಯೇ ಇದ್ದರೆ ಹಸಿರು. ಆದರೆ ನೀವು ಕಪ್ಪು ಬಣ್ಣದ ಟೊಮ್ಯಾಟೊ ನೋಡಿದ್ದೀರಾ? ಇಂಗ್ಲೆಂಡಿನ ರೇ ಬ್ರೌನ್ ಎಂಬ ತಳಿ ಶಾಸ್ತ್ರಜ್ಞ ತಮ್ಮ ತೋಟದಲ್ಲಿ ಕಡುಗಪ್ಪು ಬಣ್ಣದ ಟೊಮ್ಯಾಟೊ ಬೆಳೆಯುತ್ತಿದ್ದಾರೆ. ಬೇರೆ ಬೇರೆ ಹಣ್ಣು, ತರಕಾರಿಗಳ ಬೀಜಗಳನ್ನು ಸಂಗ್ರಹಿಸಿ ಗ್ರಾಹಕರಿಗೆ, ಕೃಷಿಕರಿಗೆ ಆಸಕ್ತ ಬೆಳೆಗಾರರಿಗೆ ನೀಡುವುದು ಇವರ ಕಾಯಕ. ಅದೇ ರೀತಿ ವಿಶೇಷವಾದ, ಅಪರೂಪದ ತಳಿಯ ಹಣ್ಣು ತರಕಾರಿಗಳ ಬೀಜಗಳನ್ನು ಆಸಕ್ತರಿಂದ ಖರೀದಿಸಿ ತೋಟದಲ್ಲಿ ಬೆಳೆಯುವುದು ಇವರ ಹವ್ಯಾಸ. ಹಾಗೆ ಗ್ರಾಹಕರೊಬ್ಬರು ತಂದುಕೊಟ್ಟ ಟೊಮ್ಯಾಟೊ ಬೀಜ ಬಳಸಿ ಕಪ್ಪು ಬಣ್ಣದ ಟೊಮ್ಯಾಟೊ ಬೆಳೆದ ಇವರು ಸಮೃದ್ಧವಾದ ಫಸಲನ್ನೂ ಪಡೆದಿದ್ದಾರೆ.

‘ಈ ಟೊಮ್ಯಾಟೊ ಗಿಡಗಳನ್ನು ನೆರಳಿನಲ್ಲಿ ಬೆಳೆಸಿ ಕೆಲವು ಬಾರಿ ಮಾತ್ರ ಸೂರ್ಯನ ಬೆಳಕು ಗಿಡದ ಮೇಲೆ ಹಾಯಲು ಬಿಟ್ಟರೆ ಜ್ಯೂಸಿ ಟೊಮ್ಯಾಟೊ ಪಡೆಯಬಹುದು. ಇದು ಕಪ್ಪು ಬಣ್ಣದ್ದಾದರೂ ಇದನ್ನು ಕತ್ತರಿಸಿದರೆ ಒಳಗೆ ಕೆಂಪು ಬಣ್ಣವೇ ಇರುತ್ತದೆ’ ಎನ್ನುತ್ತಾರೆ ಅರವತ್ತಾರು ವರ್ಷದ ಬ್ರೌನ್.

‘ಇದು ಬಹಳ ಅಪರೂಪದ ಟೊಮ್ಯಾಟೊ ಆಗಿದ್ದು ಆರೋಗ್ಯಕ್ಕೂ ಒಳ್ಳೆಯದು. ಇದರಲ್ಲಿರುವ ಆ್ಯಂಟಿ ಆಕ್ಸಿಡೆಂಟ್‌ಗಳು ಆರೋಗ್ಯಕ್ಕೆ ಪೂರಕವಾದವು. ಇದು ಕ್ಯಾನ್ಸರ್ ಅನ್ನು ತಡೆಗಟ್ಟುತ್ತದೆ. ಬೊಜ್ಜು ನಿವಾರಿಸಿ, ಮಧುಮೇಹವನ್ನು ಹತೋಟಿಗೆ ತರುತ್ತದೆ. ಈ ಟೊಮ್ಯಾಟೊದ್ದು ‘ಗುಡ್ ಸ್ಟ್ರಾಂಗ್ ಟೇಸ್ಟ್’ ಎಂದು ಹೇಳುತ್ತಾರೆ ಬ್ರೌನ್.

**ಅವನೀಶ್**

